# ಈಸ್ಟರ್ ಕತೆಗಳು

ಕೌಂಟ್ ಲಿಯೊ ಟಾಲ್‌ಸ್ಟಾಯ್ ಹೇಳಿದ ಇಬ್ಬರು ಮುದುಕರ ಕತೆ: ಒಂದು ಹಳ್ಳಿಯಲ್ಲಿ ಏಫಿಮ್ ಮತ್ತು ಎಲಿಷ ಎಂಬ ಇಬ್ಬರು ಗೆಳೆಯರಿದ್ದರು. ಅವರಿಬ್ಬರಿಗೂ ವಯಸ್ಸಾಗಿತ್ತು. ಇಬ್ಬರಿಗೂ ಮಕ್ಕಳು ಮತ್ತು ಮೊಮ್ಮಕ್ಕಳು ಇದ್ದರು. ಏಫಿಮ್ ಮಿತಭಾಷಿ. ಹಣಕಾಸಿನ ವಿಚಾರದಲ್ಲಿ ಕಟ್ಟುನಿಟ್ಟು. ದೊಡ್ಡ ಸಂಸಾರ. ಇಬ್ಬರು ಗಂಡು ಮಕ್ಕಳು ಮತ್ತು ಮದುವೆಯಾದ ಮೊಮ್ಮಗ ಇದ್ದ. ಎಲಿಷ ಇವನ ಗೆಳೆಯ. ಏಫಿಮ್‌ನಷ್ಟು ಸಿರಿವಂತನಲ್ಲ. ಆದರೆ ಎಲಿಷ ದಯಾಶಾಲಿಯೂ ಮತ್ತು ಹೆಚ್ಚು ಉದಾರವಾದಿಯೂ ಆಗಿದ್ದ. ನೆರೆಹೊರೆಯವರೊಂದಿಗೆ ಸಂತೋಷದಿಂದ ಜೀವನ ನಡೆಸುತ್ತಿದ್ದ.

ಎಂದಾದರೊಂದು ದಿನ ಜೆರುಸಲೇಮಿಗೆ ಯಾತ್ರೆ ಹೋಗಿ ಬರಬೇಕೆಂದು ಅವರಿಬ್ಬರೂ ಬಹಳ ಹಿಂದೆಯೇ ಹರಕೆ ಕಟ್ಟಿಕೊಂಡಿದ್ದರು. ಒಂದು ದಿನ ಗೆಳೆಯರಿಬ್ಬರೂ ಕುಳಿತು ಮಾತಾಡಿಕೊಂಡರು. ನಾವು ಆದಷ್ಟೂ ಬೇಗನೆ ಯಾತ್ರೆ ಹೋಗಿ ನಮ್ಮ ಹರಕೆಯನ್ನು ತೀರಿಸಬೇಕು ಎಂದು ಎಲಿಷ ಹೇಳಿದ. ಅದಕ್ಕೆ ಏಫಿಮ್ 'ಅಯ್ಯೋ ನನಗೆ ಈ ವರ್ಷ ಕೈತುಂಬಾ ಕೆಲಸವಿದೆ. ಮನೆ ಕಟ್ಟಿಸುತ್ತಿರುವುದರಿಂದ ಅದರ ವೆಚ್ಚ ಏರುತ್ತಿದೆ. ಕೈಯಲ್ಲಿ ಕಾಸಿಲ್ಲ! ನಾನು ಯಾತ್ರೆ ಹೋದರೆ ಮನೆಯನ್ನು ನೋಡಿಕೊಳ್ಳುವವರು ಯಾರು? ಆದ್ದರಿಂದ ಮುಂದಿನ ಬೇಸಗೆಗೆ ಹೋಗೋಣ' ಎಂದು ಹೇಳಿದ. ಅದಕ್ಕೆ ಎಲಿಷ 'ನನ್ನ ಹತ್ತಿರವೂ ಹಣವಿಲ್ಲ. ಹಣವನ್ನು ಹೇಗೋ ಹೊಂದಿಸಿಕೊಳ್ಳುತ್ತೇನೆ, ಇನ್ನು ತಡಮಾಡದೆ ಹೋಗಿಯೇ ಬರೋಣ' ಎಂದು ಏಫಿಮ್‌ನನ್ನು ಯಾತ್ರೆಗೆ ಒಪ್ಪಿಸಿದ.

ಏಫಿಮ್ ಮತ್ತು ಎಲಿಷ ಸಿದ್ಧತೆ ಮಾಡಿಕೊಂಡು ತಮ್ಮ ತಮ್ಮ ಮನೆಯವರಿಗೆ ತಿಳಿಹೇಳಿ ಹೊರಟರು. ಎಲಿಷ ಉಲ್ಲಾಸದಿಂದ ಹೊರಟನು. ಆದರೆ ಏಫಿಮ್ ಮನಸ್ಸು ಅಷ್ಟು ಉಲ್ಲಾಸವಾಗಿರಲಿಲ್ಲ. ಗೃಹಕೃತ್ಯದ ಯೋಚನೆಗಳಲ್ಲೇ ಮುಳುಗಿಹೋಗಿದ್ದ. ಹೀಗೆ ನಡೆದು ಒಂದು ಪಟ್ಟಣಕ್ಕೆ ಬಂದರು. ಅದು ಬರಗಾಲಕ್ಕೆ ತುತ್ತಾದ ಊರು. ಬಡತನದಿಂದಾಗಿ ಅಲ್ಲಿ ರೈತರಿಗೆ ಅನ್ನ ನೀರು ಸಿಗುವುದೇ ಕಷ್ಟವಾಗಿತ್ತು. ಬಡವರಂತೂ ಭಿಕ್ಷೆಬೇಡುತ್ತಾ ಅಲೆಯುತ್ತಿದ್ದರು. ಏಫಿಮ್ ಮತ್ತು ಎಲಿಷ ಆ ನತದೃಷ್ಟ ಊರಿಗೆ ಬಂದು ರಾತ್ರಿ ಅಲ್ಲಿಯೇ ತಂಗಿದರು.

ಮುಂಜಾನೆ ಎಲಿಷನಿಗೆ ಬಾಯಾರಿತ್ತು. ಯಾರ ಮನೆಯಲ್ಲಾದರೂ ಕೇಳಿ ನೀರು ಕುಡಿದು ಪ್ರಯಾಣ ಮುಂದುವರೆಸೋಣವೆಂದು ಅಲ್ಲೇ ಸಮೀಪದಲ್ಲಿದ್ದ ಚಿಕ್ಕ ಗುಡಿಸಿಲಿಗೆ ಹೋದ. ಏಫಿಮ್ ಗೆಳೆಯನಿಗಾಗಿ ಕಾಯದೆ ತನ್ನ ಪಯಣ ಮುಂದುವರೆಸಿದ. ಗುಡಿಸಿಲಿನಲ್ಲಿ ಮಗು ಅಳುವುದು ಕೇಳಿಸಿತು. ಕೃಶವಾಗಿದ್ದ ಮುದುಕಿಯೊಂದು ಅಲ್ಲೇ ನಿತ್ರಾಣದಿಂದ ಮಲಗಿತ್ತು. ಒಲೆಯ ಹಿಂದುಗಡೆ ಒಂದು ಹೆಂಗಸು ಮಲಗಿರುವುದು ಕಂಡಿತು. ಅಷ್ಟೊತ್ತಿಗೆ ವಯಸ್ಸಾದ ವ್ಯಕ್ತಿಯೊಬ್ಬ ತಟ್ಟಾಡುತ್ತಾ ಗೋಡೆಯನ್ನು ಹಿಡಿದುಕೊಂಡು ಒಳಬಂದ. ಹಾಗೆ ಬರುವಾಗ ನಿಲ್ಲಲು ತ್ರಾಣವಿಲ್ಲದೆ ನೆಲದ ಮೇಲೆ ಬಿದ್ದುಬಿಟ್ಟ. ಮೇಲೇಳಲು ಶಕ್ತಿಯೇ ಇರಲಿಲ್ಲ. ಅವನ ಬಾಯಿ ಒಣಗಿ ನೀರಿಗಾಗಿ ಬಾಯಿಬಿಡುತ್ತಿದ್ದ. ಎಲಿಷ ತನ್ನಲ್ಲಿದ್ದ ರೊಟ್ಟಿಯ ತುಂಡುಗಳನ್ನು ಅವರಿಗೆಲ್ಲ ಕೊಟ್ಟ. ಯಾವುದೋ ಬಾವಿಯಿಂದ ನೀರನ್ನು ತಂದು ಅವರಿಗೆ ಕುಡಿಸಿದ. ಕೂಡಲೇ ಅಂಗಡಿಗೆ ಹೋಗಿ ಅವರಿಗೆ ಅಗತ್ಯವಿದ್ದ ಹಿಟ್ಟು ತಂದು ಅದನ್ನು ಬೇಯಿಸಲು ಪಾತ್ರೆಪಡಗಗಳನ್ನು ತಂದುಕೊಟ್ಟ. ಅಂಬಲಿ ಮಾಡಿ ಹಲವು ದಿನಗಳಿಂದ ಉಪವಾಸವಿದ್ದ ಅವರಿಗೆಲ್ಲ ಉಣಿಸಿದ. ಅವರ ದಾರುಣ ಕತೆಯನ್ನು ಕೇಳಿ ಎಲಿಷ ತನ್ನ ಜೊತೆಗಾರ ಏಫಿಮ್‌ನನ್ನು ಹೋಗಿ ಸೇರಿಕೊಳ್ಳಬೇಕೆಂಬ ಆಸೆಯನ್ನೇ ಬಿಟ್ಟುಬಿಟ್ಟ. ಇಲ್ಲಿಯೇ ಇದ್ದು ಇವರಿಗೆ ನೆರವಾಗಬೇಕು ಎಂದು ಯೋಚಿಸಿದ. ಅವರು ಅಡವಿಟ್ಟಿದ್ದ ಜಮೀನನ್ನು ಬಿಡಿಸಿಕೊಟ್ಟ. ಅವರಿಗೆ ಅಗತ್ಯವಿದ್ದ ಒಂದು ಹಸುವನ್ನೂ, ಹುಲ್ಲಿನ ಕಂತೆಗಳನ್ನೂ ಜೊತೆಗೆ ಒಂದು ಕುದುರೆಯನ್ನೂ ಅದಕ್ಕೊಂದು ಗಾಡಿಯನ್ನೂ ಹಾಗೂ ಸುಗ್ಗಿಯವರೆಗೂ ಸಾಕಾಗುವಷ್ಟು ಹಿಟ್ಟನ್ನೂ ಕೊಡಿಸಿದ. ಇದರಿಂದಾಗಿ ಅವನ ಬಳಿಯಿದ್ದ ಹಣ ಖಾಲಿಯಾಗಿತ್ತು.

ಗೆಳೆಯ ಏಫಿಮ್ ಇಷ್ಟುಹೊತ್ತಿಗೆ ಜೆರುಸಲೇಮಿಗೆ ಹೋಗಿರುತ್ತಾನೆ. ದೇವರ ಮುಂದೆ ದೀಪ ಹಚ್ಚಿರುತ್ತಾನೆ. ಇನ್ನು ನಾನು ಜೆರುಸಲೇಮಿಗೆ ಹೋಗದಿದ್ದರೂ ಸರಿ, ಎಂದು ಭಾವಿಸಿ ತನ್ನ ಹಳ್ಳಿಗೆ ಹಿಂದಿರುಗಿದ. ತನ್ನಲ್ಲಿದ್ದ ಹಣವೆಲ್ಲ ಕಳ್ಳತನವಾಯಿತು, ಆದ್ದರಿಂದ ನಾನು ಹಿಂದಿರುಗಬೇಕಾಯಿತು, ಏಫಿಮ್ ಜೆರುಸಲೇಮಿಗೆ ಹೋದ ಎಂದು ಮನೆಯವರಿಗೆ ಹೇಳಿ ಮತ್ತೆ ತನ್ನ ಗೃಹಕೃತ್ಯಗಳಲ್ಲಿ ತೊಡಗಿದ. ದೇವರು ನನ್ನನ್ನು ಮನ್ನಿಸಲಿ ಎಂದುಕೊಂಡ.

ಏಫಿಮ್ ಸಮುದ್ರ, ನದಿಗಳನ್ನು ದಾಟಿ ಜೆರುಸಲೇಮಿಗೆ ಹೋದ. ತನ್ನ ಗೆಳೆಯ ತನ್ನೊಡನೆ ಬರಲಿಲ್ಲವಲ್ಲ ಎಂಬ ನೋವಿತ್ತು. ಏಫಿಮ್ ಅಲ್ಲಿ ಕ್ರಿಸ್ತನ ಪವಿತ್ರ ಸಮಾಧಿಯಿದ್ದ ಪುಟ್ಟ ಗುಡಿಯೊಳಗಿದ್ದ ಪವಿತ್ರ ದೀಪವನ್ನೇ ನೋಡುತ್ತಿದ್ದ. ಆಶ್ಚರ್ಯವೆಂಬಂತೆ ಅಲ್ಲಿಗೆ ಸಮೀಪದಲ್ಲಿ ಅವನು ಎಲಿಷನನ್ನು ನೋಡಿದ. ಅದೇ ಬೋಳುತಲೆ, ಅದೇ ಮಂದಹಾಸ, ಎಲ್ಲವೂ ಅವನೇ! ಅವನ ಹತ್ತಿರ ಹೋಗಬೇಕು ಎಂದುಕೊಂಡು ಜನಜಂಗುಳಿಯ ನಡುವೆ ತೂರಿ ಅವನಲ್ಲಿಗೆ ಹೋದ. ಆದರೆ ಎಲಿಷ ಮಾತ್ರ ಅಲ್ಲಿ ಸಿಗಲಿಲ್ಲ. ಹೀಗೆಯೇ ಇನ್ನೊಮ್ಮೆ ಹಡಗಿನ ಮೇಲೆ, ಮತ್ತೊಮ್ಮೆ ಕ್ರಿಸ್ತನ ಗೋರಿಯ ಮುಂದೆ ಎಲಿಷನನ್ನು ಕಂಡ. ಆದರೆ ಜನರ ನುಗ್ಗಾಟವನ್ನು ದಾಟಿ ಅವನ ಬಳಿಗೆ ಹೋಗುವುದರೊಳಗಾಗಿ ಎಲಿಷ ಅಲ್ಲಿರುತ್ತಿರಲಿಲ್ಲ! ಹೀಗೆ ಏಫಿಮ್ ಆರು ವಾರಗಳ ಕಾಲ ಜೆರುಸಲೇಮ್‌ನಲ್ಲಿದ್ದು ಅಲ್ಲಿಂದ ತನ್ನ ಹಳ್ಳಿಗೆ ಮರಳಿದ. ಮರಳುವ ಸಮಯದಲ್ಲಿ ಮೊದಲು ಯಾವ ಹಳ್ಳಿಯಲ್ಲಿ ಎಲಿಷ ತಂಗಿದ್ದನೊ ಆ ಕುಟುಂಬದವರನ್ನು ಭೇಟಿ ಮಾಡಿದ. ಆ ಕುಟುಂಬದವರಿಗೆ ಎಲಿಷ ಮಾಡಿದ ಸಹಾಯವನ್ನೆಲ್ಲಾ ಅವರಿಂದ ತಿಳಿದ.

ಏಫಿಮ್ ಮರಳಿ ಬಂದದ್ದನ್ನು ನೋಡಿ ಅವನ ಮನೆಯವರಿಗೆ ಸಂತೋಷವಾಯಿತು. ಮನೆಯಲ್ಲಿದ್ದ ಎಲಿಷನನ್ನು ನೋಡಿದ. ಎಲಿಷ ಜೆರುಸಲೇಮ್‌ನಲ್ಲಿ ಅವನಿಗೆ ಹೇಗೆ ಕಂಡಿದ್ದನೊ ಈಗಲೂ ಹಾಗೆಯೇ ಇದ್ದ. ನನ್ನ ಕಾಲುಗಳು ಮಾತ್ರ ಅಲ್ಲಿಗೆ ಹೋಗಿದ್ದವು. ಆದರೆ ನಿಜವಾಗಿ ಅಲ್ಲಿಗೆ ಹೋಗಿದ್ದು ನೀನೇ ಎಂದು ಎಲಿಷನಿಗೆ ಹೇಳಿದ. ಇತರರನ್ನು ಪ್ರೀತಿಸುತ್ತಾ, ಬಡವರಿಗೆ ಕೈಲಾದ ಸಹಾಯ ಮಾಡುವುದೇ ದೇವರ ನಿಜವಾದ ಕಾರ್ಯ, ನಿಜವಾದ ಪುಣ್ಯಕ್ಷೇತ್ರ ದರ್ಶನ ಎಂದು ಏಫಿಮ್ ತಿಳಿದ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಬದುಕು ಕರೆದುಕೊಂಡು ಹೋದ ಕಡೆ ನೀವು ಹೋಗದೆ, ನೀವು ಹೋದೆಡೆ ಬದುಕನ್ನು ಕರೆದುಕೊಂಡು ಹೋಗುವುದು ಜಾಣತನ.
  —ವಿ.ಕೃ. ಗೋಕಾಕ್
- ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರನ್ನ ಸ್ವಾದಿಷ್ಟ. ಕಾಲಪ್ರಜ್ಞೆ ಇಲ್ಲದವನಿಗೆ ಗಡಿಯಾರ ಬರಿ ಅಲಂಕಾರವಷ್ಟೇ.
  —ಕೆ.ಎಸ್. ನಿಸಾರ್ ಅಹಮದ್
- ಪ್ರತಿಯೊಂದು ಸಮಸ್ಯೆಗೆ ಉತ್ತರ ಇರುತ್ತದೆ. ಈ ನಂಬಿಕೆ ಇದ್ದಾಗ ಪ್ರತಿಯೊಂದು ಕಷ್ಟವೂ ಪರಿಹಾರವಾಗುತ್ತದೆ.
  —ಆಲೂರು ವೆಂಕಟರಾಯರು
- ಜಗಳ ಮಾಡಲು ಬಂದವನ ಎದುರು ಮೌನವಾಗು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.
  —ಎ.ಆರ್. ಕೃಷ್ಣಶಾಸ್ತ್ರಿ
- ದಾಂಪತ್ಯದ ಯಶಸ್ಸಿಗೆ— ಶ್ರೀಮಂತಿಕೆ, ಸೌಂದರ್ಯಕ್ಕಿಂತ ಇಬ್ಬರ ನಡುವಿನ ಗುಣ, ಸ್ವಭಾವಗಳ ಹೊಂದಾಣಿಕೆ ತುಂಬ ಮುಖ್ಯ.
  —ಕೃಷ್ಣಮೂರ್ತಿ ಪುರಾಣಿಕ
- ರೂಪ ಕಣ್ಣುಗಳಿಗೆ ಸೀಮಿತ, ಗುಣ ಆತ್ಮದವರೆಗೆ ತಲುಪುವ ಸಾಧನ.
  —ತ್ರಿವೇಣಿ
- ನಾನು ಬೇರೆ— ದೇಹ ಬೇರೆ ಎಂದು ತಿಳಿದುಕೊಂಡರೆ ರೋಗದ ಬಾಧೆಯು ಅತ್ಯಲ್ಪವಾಗುತ್ತದೆ.
  —ಎಂ.ವಿ. ಸೀತಾರಾಮಯ್ಯ